# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | 88 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಪ್ರತಾಪ ಸಿಂಹ ನಾಯಕ್ .ಕೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| **ಉತ್ತರಿಸುವ ದಿನಾಂಕ** | : | 05.07.2023 |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ, ಸೋಮೇಶ್ವರ, ಉಚ್ಚಿಲ-ಬಟ್ಟಪಾಡಿ ಸಮುದ್ರ ತೀರದಲ್ಲಿ ಭೀಕರ ಸಮುದ್ರ ಕೊರೆತದಿಂದ ಅಪಾರ ಹಾನಿ ಸಂಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | ಬಂದಿದ್ದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ, ಸೋಮೇಶ್ವರ, ಉಚ್ಚಿಲ-ಬಟ್ಟಪಾಡಿ ಸಮುದ್ರ ತೀರದಲ್ಲಿ ಸತತ ಕಡಲ್ಕೊರೆತದಿಂದ ಉಂಟಾಗಬಹುದಾದ ಸಂಭಾವ್ಯ ಅನಾಹುತ ಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಮುಂಜಾಗ್ರತಾ ಸುರಕ್ಷತಾ ಕ್ರಮಗಳೇನು; | ಸರ್ಕಾರದ ಪತ್ರ ಸಂಖ್ಯೆ: ಐಡಿಡಿ/42/ಪಿಎಸ್‌ಪಿ/2020 ದಿನಾಂಕ:28.09.2020ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಸೋಮೇಶ್ವರದಲ್ಲಿ ಸರಪಳಿ 3.600 ರಿಂದ 3.900 ಕಿ.ಮೀ ವರೆಗೆ (ಚೈ 3.700 ರಿಂದ 3.800 ಕಿ.ಮೀ ವರೆಗೆ) ₹2.90 ಕೋಟಿ ಮೊತ್ತದ ಹಾಗೂ ಸರಪಳಿ 4.100 ರಿಂದ 4.450 ಕಿ.ಮೀ ವರೆಗೆ (ಚೈ 4.200 ರಿಂದ 4.300 ಕಿ.ಮೀ ವರೆಗೆ) ₹2.10 ಕೋಟಿ ಮೊತ್ತದ ಸಮುದ್ರ ಕೊರೆತ ತಡೆಗೋಡೆ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. ವಿವರವನ್ನು **ಅನುಬಂಧ-1** ರಲ್ಲಿ ನೀಡಿದೆ.<br><br>ಪ್ರಸಕ್ತ ಸಾಲಿನಲ್ಲಿ ಉಂಟಾಗುತ್ತಿರುವ ಸಮುದ್ರ ಕೊರೆತ ಪ್ರದೇಶಗಳನ್ನು ಪರಿವೀಕ್ಷಣೆ ನಡೆಸಿ ಬಟ್ಟಂಪ್ಪಾಡಿ ಪ್ರದೇಶದಲ್ಲಿ ಮಳೆಗಾಲದಲ್ಲಿ ಉಂಟಾಗಬಹುದಾದ ಹೆಚ್ಚಿನ ಹಾನಿ ತಪ್ಪಿಸಲು ರಾಜ್ಯ ವಿಪತ್ತು ಪರಿಹಾರ ನಿಧಿ (SDRF) ಯಡಿಯಲ್ಲಿ ₹55.00 ಲಕ್ಷ ವೆಚ್ಚದಲ್ಲಿ 100 ಮೀಟರ್ ಉದ್ದದ ತುರ್ತು ತಡೆಗೋಡೆ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ. |
| ಇ) | ಸಮುದ್ರ ಕೊರೆತ ಸಂಭವಿಸಿದ ಪ್ರದೇಶಗಳಲ್ಲಿ ಯಾವೆಲ್ಲಾ ಪ್ರತಿಬಂಧಕ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; | ಉಳ್ಳಾಲ ಮತ್ತು ಸೋಮೇಶ್ವರ ಪ್ರದೇಶದ ಸಮುದ್ರ ಕೊರೆತಕ್ಕೆ ಸಂಬಂಧಿಸಿದಂತೆ ಈಗಾಗಲೇ ಏಷಿಯನ್ ಡೆವೆಲಪ್‌ಮೆಂಟ್ ಬ್ಯಾಂಕ್ (ಎಡಿಬಿ) ನೆರವಿನೊಂದಿಗೆ ಸುಸ್ಥಿರ ಕರಾವಳಿ ತೀರ ಸಂರಕ್ಷಣೆ ಮತ್ತು ನಿರ್ವಹಣಾ ಯೋಜನೆಯ ಟ್ರಾಂಚ್-1 ರಡಿಯಲ್ಲಿ 2011 ರಿಂದ 2018ರ ಅವಧಿಯಲ್ಲಿ ಉಳ್ಳಾಲ ಪ್ರದೇಶದಲ್ಲಿ 08 ಇನ್ ಶೋರ್ ಬರ್ಮ್‌ಗಳು, 02 ಆಫಶೋರ್ ರೀಫ್‌ಗಳು, ಅಲೆತಡೆಗೋಡೆಗಳ ಪುನರ್ ನಿರ್ಮಾಣ ಕಾಮಗಾರಿಗಳನ್ನು ₹246.11 ಕೋಟಿ ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ನಂತರ |

| | | |
|---|---|---|
| | | ಎಡಿಬಿ ಯೋಜನೆಯ ಟ್ರಾಂಚ್-2 ರಡಿಯಲ್ಲಿ 2016 ರಿಂದ 2021ರ ಅವಧಿಯಲ್ಲಿ ಸೋಮೇಶ್ವರ ಪ್ರದೇಶದಲ್ಲಿ 10 ಇನ್‌ಶೋರ್ ಬರ್ಮ್‌ಗಳು, 02 ಆಫ್ ಶೋರ್ ರೀಫ್‌ಗಳು ಹಾಗೂ ಮರಳು ಪೋಷಣೆಗಳ ಕಾಮಗಾರಿಗಳನ್ನು ಸುಮಾರು ₹128.27 ಕೋಟಿ ವೆಚ್ಚದಲ್ಲಿ ಕೈಗೊಳ್ಳಲಾಗಿರುತ್ತದೆ. ವಿವರವನ್ನು **ಅನುಬಂಧ-2** ರಲ್ಲಿ ನೀಡಿದೆ. |
| ಈ) | ಸದರಿ ಪ್ರದೇಶಗಳಲ್ಲಿ ಪ್ರತಿ ವರ್ಷ ಸಂಭವಿಸುವ ಸತತ ಕಡಲ್ಕೊರೆತದಿಂದ ಆಗುವ ಅನಾಹುತಗಳನ್ನು ತಡೆಗಟ್ಟಲು ಸರ್ಕಾರ ಶಾಶ್ವತ ಪರಿಹಾರಗಳನ್ನು ಯಾವ ಕಾಲಮಿತಿಯೊಳಗೆ ಕಲ್ಪಿಸುವುದು? | ಕಂದಾಯ ಇಲಾಖೆಯು ಸರ್ಕಾರದ ಆದೇಶ ಸಂಖ್ಯೆ: ಕಂಇ 331 ಟಿಎನ್‌ಆರ್ 2022 ದಿನಾಂಕ: 14.09.2022ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ರಾಜ್ಯ ವಿಪತ್ತು ಪರಿಹಾರ ನಿಧಿ (SDRF) ಯಡಿಯಲ್ಲಿ ಉಚ್ಚಿಲ-ಬಟ್ಟಪಾಡಿ, ಮೀನಕಳಿ ಮತ್ತು ಸುರತ್ಕಲ್ ಲೈಟ್ ಹೌಸ್ ಪ್ರದೇಶಗಳಲ್ಲಿ ಸಂಪರ್ಕ ರಸ್ತೆಯ ಪುನರ್ ಸ್ಥಾಪನೆ ಮತ್ತು ತೀರದ ಸಂರಕ್ಷಣೆ (Restoration of Approach Road with side protection works in Uchila-Battapadi, Meenakaliya and Surathkal Light house in Dakshina Kannada) ಕಾಮಗಾರಿಗೆ ₹5.00 ಕೋಟಿಗಳನ್ನು ಮಂಜೂರು ಮಾಡಿದ್ದು, ಅದರಂತೆ ಆದ್ಯತೆಯ ಮೇರೆಗೆ 650 ಮೀ. ಉದ್ದಕ್ಕೆ ರಸ್ತೆಯನ್ನು ಪುನರ್ ನಿರ್ಮಿಸಲು ಮತ್ತು 75 ಮೀ. ಉದ್ದಕ್ಕೆ ಸಂರಕ್ಷಣಾ ಕಾಮಗಾರಿ ಕೈಗೊಳ್ಳಲು ಗುತ್ತಿಗೆದಾರರನ್ನು ನಿಗದಿಪಡಿಸಲಾಗಿದೆ. ಕರ್ನಾಟಕ ರಾಜ್ಯ ಕರಾವಳಿ ವಲಯ ನಿಯಂತ್ರಣ ಪ್ರಾಧಿಕಾರದಿಂದ (CRZ) ನಿರಾಕ್ಷೇಪಣಾ ಪತ್ರ ಪಡೆದ ನಂತರ ಟೆಂಡರ್ ನಿಯಮಾವಳಿಯಂತೆ ಕಾಮಗಾರಿಯನ್ನು 11 ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು. ವಿವರವನ್ನು **ಅನುಬಂಧ-3** ರಲ್ಲಿ ನೀಡಿದೆ.<br><br>ಸದರಿ ಪ್ರದೇಶದ ಉಚ್ಚಿಲ ಬಟ್ಟಪಾಡಿಯಲ್ಲಿ ಪ್ರತಿ ವರ್ಷ ಸಂಭವಿಸುವ ಸತತ ಕಡಲ್ಕೊರೆತದಿಂದ ಆಗುವ ಅನಾಹುತಗಳನ್ನು ತಡೆಗಟ್ಟಲು 500 ಮೀ. ಉದ್ದದ ತಡೆಗೋಡೆಯನ್ನು Karnataka Engineering Research Station (KERS) ಸಂಸ್ಥೆ, ಮಂಡ್ಯ ರವರು ನೀಡಿದ ನವೀನ ಮಾದರಿಯ ವಿನ್ಯಾಸದಂತೆ ₹12.00 ಕೋಟಿ ವೆಚ್ಚದಲ್ಲಿ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |

ಸಂಖ್ಯೆ: ಐಡಿಡಿ 88 ಪಿಎಸ್‌ಪಿ 2023

**(ಮಂಕಾಳ ಎಸ್. ವೈದ್ಯ)**
**ಮೀನುಗಾರಿಕೆ, ಬಂದರು ಮತ್ತು**
**ಒಳನಾಡು ಜಲಸಾರಿಗೆ ಸಚಿವರು.**

# ಅನುಬಂಧ-1

## ದ.ಕ ಜಿಲ್ಲೆಯ ಮಂಗಳೂರು ತಾಲೂಕಿನ ಸೋಮೇಶ್ವರದಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರ

| ಕ್ರ.ಸಂ | ಕಾಮಗಾರಿಯ ಹೆಸರು | ಆಡಳಿತಾತ್ಮಕ ಅನುಮೋದನೆ ಸಂಖ್ಯೆ ಮತ್ತು ದಿನಾಂಕ | ಮಂಜೂರಾದ ಅಂದಾಜು ಮೊತ್ತ (₹ ಲಕ್ಷಗಳಲ್ಲಿ) | ಕಾಮಗಾರಿಯ ಪ್ರಸ್ತುತ ಹಂತ |
|---|---|---|---|---|
| 1 | 2 | 3 | 4 | 5 |
| | | | | |
| 1 | ದ.ಕ ಜಿಲ್ಲೆಯ ಮಂಗಳೂರು ತಾಲೂಕಿನ ಸೋಮೇಶ್ವರ ಎಂಬಲ್ಲಿ ಸರಪಳಿ 3.600 ರಿಂದ 3.900 ಕಿ.ಮೀ ವರೆಗೆ (ಚೈ 3.700 ರಿಂದ 3.800 ಕಿ.ಮೀ ವರೆU) ಸಮುದ್ರ ಕೊರೆತ ತಡೆಗೋಡೆ ನಿರ್ಮಾಣ | ಐಡಿಡಿ/42/ ಪಿಎಸ್‌ಪಿ 2020 (ಇ-351912) ದಿ:28.09.2020 | 290.00 | ಕಾಮಗಾರಿ ಪ್ರಗತಿಯಲ್ಲಿದೆ |
| 2 | ದ.ಕ ಜಿಲ್ಲೆಯ ಮಂಗಳೂರು ತಾಲೂಕಿನ ಸೋಮೇಶ್ವರ ಎಂಬಲ್ಲಿ ಸರಪಳಿ 4.100 ರಿಂದ 4.450 ಕಿ.ಮೀ ವರೆಗೆ (ಚೈ 4.200 ರಿಂದ 4.300 ಕಿ.ಮೀ ವರೆU) ಸಮುದ್ರ ಕೊರೆತ ತಡೆಗೋಡೆ ನಿರ್ಮಾಣ | ಐಡಿಡಿ/42/ ಪಿಎಸ್‌ಪಿ 2020 (ಇ-351912) ದಿ:28.09.2020 | 210.00 | ಕಾಮಗಾರಿ ಪ್ರಗತಿಯಲ್ಲಿದೆ |

ನಿರ್ದೇಶಕರು
ಬಂದರು ಮತುತ ಸದಸ್ಯರು
ಜಲಸಾರಿಗೆ ಮತ್ತು ಒಳನಾಡು ಜಲಸಾರಿಗೆ ನಿರ್ವಹಣೆ
ಕರ್ನಾಟಕ ಜಲಸಾರಿಗೆ ಮಂಡಳಿ,
ಕಾರವಾರ

# ಅನುಬಂಧ-2

ಎಡಿಬಿ ನೆರವಿನ ಸುಸ್ಥಿರ ಕರಾವಳಿ ತೀರ ಸಂರಕ್ಷಣೆ ಮತ್ತು ನಿರ್ವಹಣಾ ಯೋಜನೆಯ (SCPMIP) Tranche-II ರಡಿಯಲ್ಲಿ ಸೋಮೇಶ್ವರ ಪ್ರದೇಶದಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ವಿವರ

(₹ ಲಕ್ಷಗಳಲ್ಲಿ)

| ಕ್ರ. ಸಂ. | ಕಾಮಗಾರಿಯ ವಿವರ | ಮಂಜೂರಾದ ಅಂದಾಜು ಮೊತ್ತ | ಅನುಮೋದಿತ ಗುತ್ತಿಗೆ ಮೊತ್ತ | ಕಾಮಗಾರಿ ಪ್ರಾರಂಭಿಸಿದ ದಿನಾಂಕ | ಕಾಮಗಾರಿ ಪೂರ್ಣಗೊಂಡ ದಿನಾಂಕ | ವೆಚ್ಚ | ಷರಾ |
|---|---|---|---|---|---|---|---|
| 1 | 2 | 3 | | | | 4 | 5 |
| | ಟ್ರಾಂಚ್-1 | | | | | | |
| 1 | ಉಳ್ಳಾಲದಲ್ಲಿ ಇನ್‌ಶೋರ್ ಬರ್ಮ್‌ಗಳ ನಿರ್ಮಾಣ | 26.25 | 38.60 | 03-12-2013 | 30-06-2018 | 38.6 | ಉಳ್ಳಾಲದಲ್ಲಿ 8 ಇನ್‌ಶೋರ್ ಬರ್ಮ್‌ಗಳ ನಿರ್ಮಾಣ ಮತ್ತು 245 ಮೀ. ಉದ್ದದ ನದಿ ದಂಡೆ ರಿವೆಟ್‌ಮೆಂಟ್ ಕಾಮಗಾರಿ ಮುಕ್ತಾಯಗೊಂಡಿರುತ್ತದೆ. |
| 2 | ಉಳ್ಳಾಲದಲ್ಲಿ ಬ್ರೇಕ್‌ವಾಟರ್‌ಗಳ ಪುನರ್ ನಿರ್ಮಾಣ | 46.40 | 58.32 | 01-12-2014 | 30-05-2017 | 58.32 | ಉತ್ತರ ಮತ್ತು ದಕ್ಷಿಣ ಬ್ರೇಕ್‌ವಾಟರ್ ಸದೃಢಗೊಳಿಸುವುದು ಹಾಗೂ ದಕ್ಷಿಣ ಬ್ರೇಕ್‌ವಾಟರ್ ನ tail end ನ್ನು ವಿಸ್ತರಿಸುವ ಕಾಮಗಾರಿ ಪೂರ್ಣಗೊಂಡಿರುತ್ತದೆ. |
| 3 | ಉಳ್ಳಾಲದಲ್ಲಿ 2 ಆಫ್‌ಶೋರ್ ರೀಫ್‌ಗಳ ನಿರ್ಮಾಣ | 88.00 | 110.00 | 01-12-2014 | 26-05-2017 | 107.63 | ದಕ್ಷಿಣ ಮತ್ತು ಉತ್ತರದ 2 ಆಫ್‌ಶೋರ್ ರೀಫ್‌ಗಳ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ. |
| 4 | PMDCK Consultant | 20.37 | 28.65 | 28-01-2012 | 30-06-2017 | 27.35 | ಕನ್ಸಲ್ಟೆನ್ಸಿ ಸೇವೆಯನ್ನು ಪಡೆಯಲಾಗಿರುತ್ತದೆ. |
| 5 | Community Initiatives | 2.47 | 1.25 | 01-01-2017 | 30-06-2017 | 0.39 | 2 SMO (ಉಳ್ಳಾಲ ಮತ್ತು ಬೇಂಗ್ರೆಯಲ್ಲಿ) ರಚಿಸಲಾಗಿದೆ. |
| 6 | ಇತರೆ | 15.33 | 6.03 | | | 13.82 | ಇತರೆ ಕಾಮಗಾರಿಗಳಾದ ಸರ್ವೇ ಮತ್ತು Equipment ಹಾಗೂ ಕಚೇರಿಯ ಆಡಳಿತ ವೆಚ್ಚವಾಗಿರುತ್ತದೆ. |
| | ಒಟ್ಟು | 198.82 | 242.85 | | | 246.11 | |
| | ಟ್ರಾಂಚ್-1 | | | | | | |

| ಕ್ರ. ಸಂ. | ಕಾಮಗಾರಿಯ ವಿವರ | ಮಂಜೂರಾದ ಅಂದಾಜು ಮೊತ್ತ | ಅನುಮೋದಿತ ಗುತ್ತಿಗೆ ಮೊತ್ತ | ಕಾಮಗಾರಿ ಪ್ರಾರಂಭಿಸಿದ ದಿನಾಂಕ | ಕಾಮಗಾರಿ ಪೂರ್ಣಗೊಂಡ ದಿನಾಂಕ | ವೆಚ್ಚ | ಷರಾ |
|---|---|---|---|---|---|---|---|
| 1 | 2 | 3 | | | | 4 | 5 |
| 1 | Someshwara - Construction of Geotextile Revetment for shoreline protection and Management – 10 Nos. | 32.15 | 26.33 | 07-12-2018 | 28-09-2020 | 23.58 | ಕಾಮಗಾರಿ ಪೂರ್ಣಗೊಂಡಿದೆ. |
| 2 | Someshwara - Construction of 2 No's of Offshore Reefs and Nourishment for shoreline protection and Management | 108.80 | 109.95 | 22-07-2019 | 31-03-2021 | 104.69 | ಉತ್ತರ ರೀಫ್ ಮತ್ತು ದಕ್ಷಿಣ ರೀಫ್ ಕಾಮಗಾರಿ ಮತ್ತು ಮರಳು ಪೋಷಣೆ ಕಾಮಗಾರಿ ಪೂರ್ಣಗೊಂಡಿದೆ. |
| | ಒಟ್ಟು | 140.95 | 136.28 | | | 128.27 | |

ನಿರ್ದೇಶಕರು
ಬಂದರು ಮತ್ತು ಸದಸ್ಯರು
ಜಲಸಾರಿಗೆ ಮತ್ತು ಒಳನಾಡು ಜಲಸಾರಿಗೆ ನಿರ್ವಹಣೆ
ಕರ್ನಾಟಕ ಜಲಸಾರಿಗೆ ಮಂಡಳಿ,
ಕಾರವಾರ

# ನಿರ್ದೇಶಕರು, ಬಂದರು ಮತ್ತು ಸದಸ್ಯರು, ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ ರವರ ನಡವಳಿಗಳು

**ವಿಷಯ :** 2022-23 ನೇ ಸಾಲಿನ ಮಳೆಗಾಲದಲ್ಲಿ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ತೀವ್ರ ಸಮುದ್ರ ಕೊರೆತ ಸಂಭವಿಸಿದ ಪ್ರದೇಶಗಳಲ್ಲಿ ಪರಿಹಾರ ಕಾರ್ಯಗಳಿಗಾಗಿ ರಾಜ್ಯ ವಿಪತ್ತು ಪರಿಹಾರ ನಿಧಿಯಡಿ ಬಿಡುಗಡೆ ಮಾಡಲಾದ ಅನುದಾನದಡಿಯಲ್ಲಿ ಕೈಗೆತ್ತಿಕೊಳ್ಳಲಾಗುವ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ :**
1. ಸರ್ಕಾರದ ಆದೇಶ ಸಂ. : ಕಇಂ 331 ಟಿಎನ್ಆರ್ 2022 ದಿನಾಂಕ : 14.09.2022
2. ಮುಖ್ಯ ಇಂಜಿನೀಯರ್ ಮತ್ತು ಸದಸ್ಯರು (ತಾಂತ್ರಿಕ), ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ ರವರ ಪತ್ರ ಸಂ. : ಕಜಮಂ/ಮುಇ/ತಾಂತ್ರಿಕ/2022-23/129 ದಿನಾಂಕ : 19.10.2022 ಹಾಗೂ ಪತ್ರ ಸಂ: 181 ದಿನಾಂಕ: 12.12.2022

**ಪ್ರಸ್ತಾವನೆ :**

ಉಲ್ಲೇಖಿತ (1) ರ ಸರ್ಕಾರದ ಆದೇಶದಲ್ಲಿ 2022-23 ನೇ ಸಾಲಿನ ಮಳೆಗಾಲದ ಸಂದರ್ಭದಲ್ಲಿ ಸಮುದ್ರ ಕೊರೆತದಿಂದ ಉಂಟಾದ ಸಾರ್ವಜನಿಕ ಮೂಲಭೂತ ಸೌಕರ್ಯಗಳ ಹಾನಿಯ ದುರಸ್ತಿಗಾಗಿ ಕಾಮಗಾರಿಗಳನ್ನು ಕೈಗೊಳ್ಳಲು ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ತಲಾ ರೂ. 5.00 ಕೋಟಿಗಳಂತೆ ಒಟ್ಟು ರೂ. 15.00 ಕೋಟಿ ಅನುದಾನವನ್ನು ಕರ್ನಾಟಕ ಜಲಸಾರಿಗೆ ಮಂಡಳಿಯ ಲೆಕ್ಕ ಶೀರ್ಷಿಕೆ 4711-02-103-2-02-139 ರಡಿ ಕೆಲವೊಂದು ಷರತ್ತಿಗೊಳಪಟ್ಟು ಬಿಡುಗಡೆ ಮಾಡಲಾಗಿರುತ್ತದೆ.

ಸದರಿ ಆದೇಶದನ್ವಯ ಮುಖ್ಯ ಇಂಜಿನೀಯರ್ ಮತ್ತು ಸದಸ್ಯರು (ತಾಂತ್ರಿಕ), ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ ರವರು ಕರಾವಳಿಯ 3 ಜಿಲ್ಲೆಗಳಿಗೆ ತಲಾ ರೂ. 5.00 ಕೋಟಿಗಳಂತೆ ಬಿಡುಗಡೆಯಾದ ಅನುದಾನಕ್ಕನುಗುಣವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದ ಕ್ರಿಯಾಯೋಜನೆ ಹಾಗೂ ಅಂದಾಜುಪಟ್ಟಿಯನ್ನು ಶಿಫಾರಸ್ಸಿನೊಂದಿಗೆ ಅನುಮೋದನೆ ಕೋರಿ ಉಲ್ಲೇಖಿತ (2)ರ ಪತ್ರದಲ್ಲಿ ಸಲ್ಲಿಸಿರುತ್ತಾರೆ. ವಿವರ ಈ ಕೆಳಗಿನಂತಿರುತ್ತದೆ.

| ಕ್ರ.ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| | **ದಕ್ಷಿಣ ಕನ್ನಡ ಜಿಲ್ಲೆ** | |
| 1. | Restoration of approach road with side protection work in Uchila Battapadi, Meenakaliya and Surathkal Light House in D.K. District | 500.00 |

ಸರ್ಕಾರದ ಆದೇಶ ಸಂ. IDD 44 PSP 2020 ದಿನಾಂಕ : 04.12.2020 ರ ಕ್ರಮ ಸಂಖ್ಯೆ 55 (a) ರಲ್ಲಿ ಕರ್ನಾಟಕ ಜಲಸಾರಿಗೆ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಪ್ರತ್ಯಾಯೋಜಿಸಲಾದ ಆರ್ಥಿಕ ಅಧಿಕಾರದನ್ವಯ ಈ ಮೇಲೆ ಉಲ್ಲೇಖಿಸಿರುವ ಕಾಮಗಾರಿಗೆ ಮುಖ್ಯ

...2..

ಕಾರ್ಯನಿರ್ವಹಣಾಧಿಕಾರಿಯವರಿಂದ ನಿರ್ದೇಶಿಸಲ್ಪಟ್ಟು, ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

<u>**ಆಡಳಿತಾತ್ಮಕ ಅನುಮೋದನೆ ಸಂಖ್ಯೆ:ಕಜಮ-41/ಅಭಿವೃದ್ಧಿ-II/2022**</u>   <u>**ದಿನಾಂಕ: 31 /12/2022**</u>

2022-23 ನೇ ಸಾಲಿನ ಮಳೆಗಾಲದಲ್ಲಿ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ತೀವ್ರ ಸಮುದ್ರ ಕೊರೆತ ಸಂಭವಿಸಿದ ಪ್ರದೇಶಗಳಲ್ಲಿ ಪರಿಹಾರ ಕಾರ್ಯಗಳಿಗಾಗಿ ರಾಜ್ಯ ವಿಪತ್ತು ಪರಿಹಾರ ನಿಧಿಯಡಿ ಬಿಡುಗಡೆ ಮಾಡಲಾದ ಅನುದಾನದಡಿಯಲ್ಲಿ ಕೈಗೆತ್ತಿಕೊಳ್ಳಲಾಗುವ ದಕ್ಷಿಣ ಕನ್ನಡ ಜಿಲ್ಲೆಯ ಮೇಲಿನ 1 ಕಾಮಗಾರಿಯ ಅಂದಾಜು ಮೊತ್ತ ರೂ. 500.00 ಲಕ್ಷಗಳಿಗೆ ಸರ್ಕಾರದ ಆದೇಶದಲ್ಲಿ ವಿಧಿಸಿದ ಎಲ್ಲಾ ಷರತ್ತುಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ಹಾಗೂ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಈ ಕಛೇರಿಯಿಂದ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

1. ಸರ್ಕಾರದ ಆದೇಶ ಸಂ. : ಕಇಂ 331 ಟಿಎನ್ಆರ್ 2022 ದಿನಾಂಕ : 14.09.2022ರಲ್ಲಿ ವಿಧಿಸಿದ ಎಲ್ಲಾ ಷರತ್ತುಗಳನ್ನು ಪಾಲಿಸುವುದು.
2. ಪ್ರಸ್ತಾಪಿತ ಕಾಮಗಾರಿಗಳ ಅಂದಾಜುಪಟ್ಟಿಗಳನ್ನು SDRF/NDRF ಮಾರ್ಗಸೂಚಿಗಳಂತೆ ತಯಾರಿಸಿರುವ ಬಗ್ಗೆ ಮುಖ್ಯ ಇಂಜಿನೀಯರ್ ರವರು ಖಚಿತಪಡಿಸಿಕೊಳ್ಳುವುದು.
3. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಿಕತೆ ಅಧಿನಿಯಮ 1999 ಹಾಗೂ ನಿಯಮ 2000 ಗಳ ಪಾಲನೆಯನ್ವಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದು.
4. ವಿಪತ್ತು ಪರಿಹಾರ ನಿಧಿಯಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತಿರುವುದರಿಂದ, ಪ್ರಸ್ತಾಪಿತ ಕಾಮಗಾರಿಗಳ ಇತ್ತೀಚಿನ ಫೋಟೋ, ನಂತರದಲ್ಲಿ ಪ್ರಗತಿಯಲ್ಲಿರುವಾಗ ಮತ್ತು ಮುಕ್ತಾಯದ ವಿವರಗಳನ್ನು ವಿಡಿಯೋ/ ಫೋಟೋಗಳ ಮೂಲಕ ಸಂಬಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್/ಕಾರ್ಯನಿರ್ವಾಹಕ ಇಂಜಿನೀಯರ್ ರವರು ಕಾಮಗಾರಿ ಸ್ಥಳದಲ್ಲಿ ಖುದ್ದಾಗಿ ನಿಂತು ದಾಖಲಿಸಿಕೊಳ್ಳುವುದು.

(ಕ್ಯಾಪ್ಟನ್ ಸಿ. ಸ್ವಾಮಿ) 31/12
ನಿರ್ದೇಶಕರು,
ಬಂದರು ಮತ್ತು ಸದಸ್ಯರು
(Maritime & IWT Operation)
ಕರ್ನಾಟಕ ಜಲಸಾರಿಗೆ ಮಂಡಳಿ,
ಕಾರವಾರ

ಇವರಿಗೆ :

ಮುಖ್ಯ ಇಂಜಿನೀಯರ್ ಮತ್ತು ಸದಸ್ಯರು (ತಾಂತ್ರಿಕ), ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿ : ಕಾರ್ಯನಿರ್ವಾಹಕ ಇಂಜಿನೀಯರ್, ಬಂದರು ವಿಭಾಗ, ಕಾರವಾರ/ ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ ರವರಿಗೆ ಸೂಕ್ತ ಕ್ರಮಕ್ಕಾಗಿ.

21

ಕರ್ನಾಟಕ ಸರ್ಕಾರ

ಸಂಖ್ಯೆ: ಐಡಿಡಿ 42 ಪಿಐಎಸ್‌ಪಿ 2020 (E-351912)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:28.09.2020

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಹಾಗೂ
ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:

ಮುಖ್ಯ ಅಭಿಯಂತರರು
ಸಂಪರ್ಕ ಮತ್ತು ಕಟ್ಟಡ (ಉತ್ತರ)
ಲೋಕೋಪಯೋಗಿ ಇಲಾಖೆ,
ಧಾರವಾಡ.

ಮಾನ್ಯರೇ,

ವಿಷಯ: 2020-21ನೇ ಸಾಲಿನಲ್ಲಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಲೆಕ್ಕಶೀರ್ಷಿಕೆ 4711ರಡಿ ಸಮುದ್ರ ಕೊರೆತ ಪ್ರತಿಬಂಧ ಕಾಮಗಾರಿಗಳಿಗೆ ಪರಿಷ್ಕೃತ ಕ್ರಿಯಾಯೋಜನೆಯ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ 2020-21ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 4711ರಡಿಯಲ್ಲಿ ಆರ್ಥಿಕ ಇಲಾಖೆರವರು ರೂ.7000.00 ಲಕ್ಷಗಳಿಗೆ ಸಮುದ್ರ ಕೊರೆತ ಪ್ರತಿಬಂಧ ಕಾಮಗಾರಿಗಳಿಗೆ ಅನುದಾನ ಒದಗಿಸಿರುತ್ತಾರೆ. ಆದುದರಿಂದ 2020-21ನೇ ಸಾಲಿಗೆ ಲೆಕ್ಕಶೀರ್ಷಿಕೆ 4711ರಡಿ ಸಮುದ್ರಕೊರೆತ ಪ್ರತಿಬಂಧಕ ಕಾಮಗಾರಿಗಳಿಗೆ ಈ ಹಿಂದೆ ನೀಡಿರುವ ಆಡಳಿತ ಮಂಜೂರಾತಿಯನ್ನು ರದ್ದುಗೊಳಿಸಿ, ಎಲ್ಲಾ ಟೆಂಡರ್ ಪ್ರಕ್ರಿಯೆಗಳನ್ನು ಸ್ಥಗಿತಗೊಳಿಸಲು ಸೂಚಿಸಿದೆ.

ಮುಂದುವರೆದು, 2020-21ನೇ ಸಾಲಿನಲ್ಲಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಲೆಕ್ಕಶೀರ್ಷಿಕೆ 4711ರಡಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಈ ಕೆಳಕಂಡ 36 ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆಯೆಂದು ತಿಳಿಸುತ್ತಾ, ಲೋಕೋಪಯೋಗಿ ಕೋಡ್ ಗಳನ್ವಯ ನಿಯಮಾನುಸಾರ ಸದರಿ ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿಯನ್ನು ಒಂದು ವಾರದೊಳಗೆ ನೀಡಿ, ಮುಂದಿನ ಅಗತ್ಯ ಕ್ರಮ ಕೈಗೊಳ್ಳುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

| ಕ್ರ. ಸಂ | ಕಾಮಗಾರಿಯ ಹೆಸರು | ಮೊತ್ತ (ಲಕ್ಷಗಳಲ್ಲಿ) |
|---|---|---|
| 1 | ಉಡುಪಿ ತಾಲ್ಲೂಕು ಕಾಪು ಕೈಪುಂಜಾಲು ಪ್ರದೇಶದ ಪರಿಶಿಷ್ಟ ಜಾತಿ ಕಾಲೊನಿಯ ಬಳಿ ಕಡಲ ತೀರದಲ್ಲಿ ಚೈ. 56.400 ರಿಂದ 56.530 ಕಿ.ಮೀ ವರೆಗೆ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ. | 100.00 |
| 2 | ಉಡುಪಿ ತಾಲೂಕು ಪಡುಮಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಪಡುಮಾಡು ಕೋಡಿಯ ಕಾಶೀಶ್ವರ ಗುಡಿಯ ಹತ್ತಿರ ಕಡಲ ತೀರದಲ್ಲಿ ಚೈ. 39.960 ರಿಂದ 40.280 ಕಿ. ಮೀ ವರೆಗೆ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ | 100.00 |
| 3 | ಉಡುಪಿ ತಾಲ್ಲೂಕು ಪಡುಬಿದ್ರಿ ನಡಿಪಟ್ಣ ಬಳಿ "ಪರ್ಣ ನಿಕೇತನ " ಮನೆ ಹತ್ತಿರ ಕಡಲು ತೀರದಲ್ಲಿ ಚೈ. 42.685 ರಿಂದ 42.815 ಕಿ ಮೀ ವರೆಗೆ ಸಮುದ್ರ ಕೊರೆತ ತಡೆಗೋಡೆ ನಿರ್ಮಾಣ. | 100.00 |
| 4 | ಉಡುಪಿ ಜಿಲ್ಲೆ ಕುಂದಾಪುರ ತಾಲೂಕು ಶಿರೂರು ಗ್ರಾಮದ ದೊಡ್ಡಹಿತ್ಲು ಕಡಲ ತೀರದಲ್ಲಿ ಚೈ.133.017 ರಿಂದ 133.031 ಕಿ.ಮೀ ವರೆಗೆ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ | 12.00 |
| 5 | ಉಡುಪಿ ಜಿಲ್ಲೆ ಕುಂದಾಪುರ ತಾಲೂಕು ಕಿರಿಮಂಜೇಶ್ವರ ಗ್ರಾಮದ ಹೊಸಹಿತ್ಲು ರಾಮಮಂದಿರದ ಉತ್ತರ ಭಾಗದ ಕಡಲ ತೀರದಲ್ಲಿ ಚೈ. 121.407 ರಿಂದ 121.537 ಕಿ.ಮೀ ವರೆಗೆ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ. | 90.00 |
| 6 | ಉಡುಪಿ ಜಿಲ್ಲೆ ಕುಂದಾಪುರ ತಾಲೂಕು ಕಿರಿಮಂಜೇಶ್ವರ ಗ್ರಾಮದ ಕೊಡೇರಿ ವ್ಯಾಪ್ತಿಯ ಕಡಲ ತೀರದಲ್ಲಿ ಚೈ. 124.125 ರಿಂದ 124.253 ಕಿ.ಮೀ ವರೆಗೆ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ. | 87.00 |
| 7 | ಉಡುಪಿ ಜಿಲ್ಲೆ ಕುಂದಾಪುರ ತಾಲೂಕು ಕಿರಿಮಂಜೇಶ್ವರ ಗ್ರಾಮದ ಆದ್ರ ಗೋಳಿ ಕಡಲ ತೀರದಲ್ಲಿ ಚೈ. 119.910 ರಿಂದ 120.034 ಕಿ.ಮೀ ವರೆಗೆ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ. | 100.00 |
| 8 | ಉತ್ತರ ಕನ್ನಡ ಜಿಲ್ಲೆ ಕುಮಟಾ ತಾಲೂಕಿನ ಗಂಗೆ ಕೊಳ್ಳದ ಕಡಲ ತೀರದಲ್ಲಿ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ಕಾಮಗಾರಿ (ಚೈ.229.531 ರಿಂದ 230.031 ಕಿ ಮೀ.) | 300.00 |
| 9 | ಉತ್ತರ ಕನ್ನಡ ಜಿಲ್ಲೆ ಕುಮಟಾ ತಾಲೂಕಿನ ದುಬ್ಬನ ಶಶಿ ಕಡಲ ತೀರದಲ್ಲಿ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ಕಾಮಗಾರಿ( ಚೈ.226.930 ರಿಂದ 227.230 ಕಿ ಮೀ.) ಹಾಗೂ (ಚೈ 227.510 ರಿಂದ 227.710 ಕಿ ಮೀ) | 300.00 |
| 10 | ಉತ್ತರ ಕನ್ನಡ ಜಿಲ್ಲೆ ಕಾರವಾರ ತಾಲೂಕಿನ ಮಾಜಾಳಿ ಪ್ರದೇಶದಲ್ಲಿ ಸಮುದ್ರ ಕೊರೆತ ಪ್ರತಿಬಂಧಕ ಕಾಮಗಾರಿ ( ಚೈ.299.248 ರಿಂದ 299.500 ಕಿ.ಮೀ ವರೆಗೆ) | 170.00 |
| 11 | ಉತ್ತರ ಕನ್ನಡ ಜಿಲ್ಲೆ ಕಾರವಾರ ತಾಲೂಕಿನ ಕೋಡಿಬಾಗ ಪ್ರದೇಶದಲ್ಲಿ ಸಮುದ್ರ ಕೊರೆತ ಪ್ರತಿಬಂಧಕ ಕಾಮಗಾರಿ (ಚೈ.291.510 ರಿಂದ 291.810 ಕಿ ಮೀ ವರೆಗೆ) | 200.00 |
| 12 | ಉತ್ತರ ಕನ್ನಡ ಜಿಲ್ಲೆ ಅಂಕೋಲಾ ತಾಲೂಕಿನ ಕೇಣಿ ಪ್ರದೇಶದಲ್ಲಿ ಸಮುದ್ರ ಕೊರೆತ ಪ್ರತಿಬಂಧಕ ಕಾಮಗಾರಿ ( ಚೈ.247.115 ರಿಂದ 247.585 ಕಿ ಮೀ ವರೆಗೆ) | 350.00 |
| 13 | ಉತ್ತರ ಕನ್ನಡ ಜಿಲ್ಲೆ ಅಂಕೋಲಾ ತಾಲೂಕಿನ ಕೇಣಿ ಪ್ರದೇಶದಲ್ಲಿ ಸಮುದ್ರ ಕೊರೆತ | 200.00 |

| | | |
|---|---|---|
| | ಪ್ರತಿಬಂಧಕ ಕಾಮಗಾರಿ (ಚೈ.247.740 ರಿಂದ 248.000 ಕಿ ಮೀ ವರೆಗೆ) | |
| 14 | ಉಡುಪಿ ಜಿಲ್ಲೆ ಕುಂದಾಪುರ ವಿಧಾನಸಭಾ ಕ್ಷೇತ್ರದ ಕೋಟಾ ಪಡುಕೆರೆ ಪಾರಂಪಳ್ಳಿ ಶನೇಶ್ವರ ದೇವಾಸ್ಥಾನದ ಕಡಲತೀರದಲ್ಲಿ ( ಚೈ. 88.182 ರಿಂದ 88.262) ಕಿ.ಮೀ ವರೆಗೆ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ ಕಾಮಗಾರಿ. | 80.00 |
| 15 | ಉಡುಪಿ ಜಿಲ್ಲೆ ಕುಂದಾಪುರ ವಿಧಾನಸಭಾ ಕ್ಷೇತ್ರದ ಕೋಟಾ ಪಡುಕೆರೆ ಪಾರಂಪಳ್ಳಿ ಶನೇಶ್ವರ ದೇವಾಸ್ಥಾನದ ಕಡಲತೀರದಲ್ಲಿ (ಚೈ. 88.262 ರಿಂದ 88.342) ಕಿ.ಮೀ ವರೆಗೆ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ ಕಾಮಗಾರಿ. | 80.00 |
| 16 | ಉಡುಪಿ ಜಿಲ್ಲೆ ಕುಂದಾಪುರ ವಿಧಾನಸಭಾ ಕ್ಷೇತ್ರದ ಕೋಟಾ ಪಡುಕೆರೆ ಪಾರಂಪಳ್ಳಿ ಶನೇಶ್ವರ ದೇವಾಸ್ಥಾನದ ಕಡಲತೀರದಲ್ಲಿ ( ಚೈ. 88.717 ರಿಂದ 88.871) ಕಿ.ಮೀ ವರೆಗೆ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ ಕಾಮಗಾರಿ. | 80.00 |
| 17 | ಉಡುಪಿ ಜಿಲ್ಲೆ ಕುಂದಾಪುರ ವಿಧಾನಸಭಾ ಕ್ಷೇತ್ರದ ಕೋಟಾ ಪಡುಕೆರೆ ಪಾರಂಪಳ್ಳಿ ಶನೇಶ್ವರ ದೇವಾಸ್ಥಾನದ ಕಡಲತೀರದಲ್ಲಿ ( ಚೈ. 88.342 ರಿಂದ 88.417) ಕಿ.ಮೀ ವರೆಗೆ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ ಕಾಮಗಾರಿ. | 80.00 |
| 18 | ಉಡುಪಿ ಜಿಲ್ಲೆ ಕುಂದಾಪುರ ವಿಧಾನಸಭಾ ಕ್ಷೇತ್ರದ ಕೋಟಾ ಪಡುಕೆರೆ ಪಾರಂಪಳ್ಳಿ ಶನೇಶ್ವರ ದೇವಾಸ್ಥಾನದ ಕಡಲತೀರದಲ್ಲಿ (ಚೈ. 88.417 ರಿಂದ 88.492) ಕಿ.ಮೀ ವರೆಗೆ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ ಕಾಮಗಾರಿ. | 80.00 |
| 19 | ಉಡುಪಿ ಜಿಲ್ಲೆ ಕುಂದಾಪುರ ವಿಧಾನಸಭಾ ಕ್ಷೇತ್ರದ ಕೋಟಾ ಪಡುಕೆರೆ ಪಾರಂಪಳ್ಳಿ ಶನೇಶ್ವರ ದೇವಾಸ್ಥಾನದ ಕಡಲತೀರದಲ್ಲಿ ( ಚೈ. 88.492 ರಿಂದ 88.567) ಕಿ.ಮೀ ವರೆಗೆ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ ಕಾಮಗಾರಿ. | 80.00 |
| 20 | ಉಡುಪಿ ಜಿಲ್ಲೆ ಕುಂದಾಪುರ ವಿಧಾನಸಭಾ ಕ್ಷೇತ್ರದ ಕೋಟಾ ಪಡುಕೆರೆ ಪಾರಂಪಳ್ಳಿ ಶನೇಶ್ವರ ದೇವಾಸ್ಥಾನದ ಕಡಲತೀರದಲ್ಲಿ (ಚೈ. 88.567 ರಿಂದ 88.642) ಕಿ.ಮೀ ವರೆಗೆ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ ಕಾಮಗಾರಿ. | 80.00 |
| 21 | ಉಡುಪಿ ಜಿಲ್ಲೆ ಕುಂದಾಪುರ ವಿಧಾನಸಭಾ ಕ್ಷೇತ್ರದ ಕೋಟಾ ಪಡುಕೆರೆ ಪಾರಂಪಳ್ಳಿ ಶನೇಶ್ವರ ದೇವಾಸ್ಥಾನದ ಕಡಲತೀರದಲ್ಲಿ (ಚೈ. 88.642 ರಿಂದ 88.717) ಕಿ.ಮೀ ವರೆಗೆ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ ಕಾಮಗಾರಿ. | 80.00 |
| 22 | ಉಡುಪಿ ಜಿಲ್ಲೆಯ ಹೆಜಮಾಡಿ ಕಡಲ ತೀರದ ತಡೆಗೋಡೆ ನಿರ್ಮಾಣ ಕಾಮಗಾರಿ. | 475.00 |
| 23 | ಉಡುಪಿ ಜಿಲ್ಲೆಯ ಮೂಳೂರು ಕಡಲ ತೀರದ ತಡೆಗೋಡೆ ನಿರ್ಮಾಣ ಕಾಮಗಾರಿ. | 475.00 |
| 24 | ಉಡುಪಿ ಜಿಲ್ಲೆಯ ಪಡುಬಿದ್ರಿ ಕಡಲ ತೀರದ ತಡೆಗೋಡೆ ನಿರ್ಮಾಣ ಕಾಮಗಾರಿ. | 475.00 |
| 25 | ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಮೀನಕಳಿಯ ಎಂಬಲ್ಲಿ ಸರಪಳಿ 22.500 ಕಿ.ಮೀ ರಿಂದ 22.750 ಕಿ.ಮೀ ವರೆಗೆ ದೀರ್ಘಕಾಲಿಕ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ. | 150.00 |
| 26 | ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಚಿತ್ರಾಪುರ ಎಂಬಲ್ಲಿ 23.600 ಕಿ.ಮೀ ರಿಂದ 23.900 ಕಿ.ಮೀ ವರೆಗೆ ದೀರ್ಘಕಾಲಿಕ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ. | 160.00 |

| | | |
|---|---|---|
| 27 | ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆ ತಾಲೂಕಿನ ಸಸಿಹಿತ್ಲು ಎಂಬಲ್ಲಿ ಸರಪಳಿ 37.610 ಕಿ.ಮೀ ರಿಂದ 37.910 ಕಿ.ಮೀ ವರೆಗೆ ದೀರ್ಘಕಾಲಿಕ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ ಕಾಮಗಾರಿ. | 165.00 |
| 28 | ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಸೋಮೇಶ್ವರ ಎಂಬಲ್ಲಿ ಸರಪಳಿ 3.600 ಕಿ.ಮೀ ರಿಂದ 3.900 ಕಿ.ಮೀ ವರೆಗೆ ದೀರ್ಘಕಾಲಿಕ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ. | 290.00 |
| 29 | ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಸೋಮೇಶ್ವರ ಎಂಬಲ್ಲಿ ಸರಪಳಿ 4.100 ಕಿ.ಮೀ ರಿಂದ 4.450 ಕಿ.ಮೀ ವರೆಗೆ ದೀರ್ಘಕಾಲಿಕ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ (300.00 ಉಪ್ಪ) | 210.00 |
| 30 | ಉಡುಪಿ ಜಿಲ್ಲೆ ಉಡುಪಿ ವಿಧಾನ ಸಭಾ ಕ್ಷೇತ್ರದ ಮಲ್ಪೆ ಪಡುಕೆರೆ ಸಮುದ್ರ ತೀರದಲ್ಲಿ ಪ್ರತಿಬಂಧಕ ತಡೆಗೋಡೆ. | 500.00 |
| 31 | ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲೂಕಿನ ಹೊಸಬೆಟ್ಟು-ಚಿತ್ರಾಪುರ ಎಂಬಲ್ಲಿ ಸರಪಳಿ 24.690 ರಿಂದ 24.920 ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ. | 250.00 |
| 32 | ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆ ತಾಲೂಕಿನ ಸಸಿಹಿತ್ಲು ಎಂಬಲ್ಲಿ 37.160 ಕಿ.ಮೀ ರಿಂದ 37.360 ಕಿ.ಮೀ ವರೆಗೆ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ ಕಾಮಗಾರಿ. | 250.00 |
| 33 | ಉಡುಪಿ ಜಿಲ್ಲೆ, ಉಡುಪಿ ವಿಧಾನಸಭಾ ಕ್ಷೇತ್ರದ ಬಡಾನಿಡಿಯೂರು ಗ್ರಾಮ ಪಂಚಾಯತ್ ವ್ಯಾಪ್ತಿ ಕಡಲ ತೀರದಲ್ಲಿ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ. | 250.00 |
| 34 | ಉಡುಪಿ ಜಿಲ್ಲೆ ಉಡುಪಿ ವಿಧಾನಸಭಾ ಕ್ಷೇತ್ರದ ಗುಜ್ಜರ ಬೆಟ್ಟು ಕಡಲ ತೀರದಲ್ಲಿ ಉಂಟಾಗಿರುವ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ. | 250.00 |
| 35 | ಉತ್ತರ ಕನ್ನಡ ಜಿಲ್ಲೆ ಭಟ್ಕಳ ವಿಧಾನಸಭಾ ಕ್ಷೇತ್ರದ ಭಟ್ಕಳ ಬೆಳಕೆ ಸಮುದ್ರ ತೀರದಲ್ಲಿ ಖಾಯಂ ಸಮುದ್ರ ಕೋರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ ಕಾಮಗಾರಿ | 200.00 |
| 36 | ಉತ್ತರ ಕನ್ನಡ ಜಿಲ್ಲೆ ಭಟ್ಕಳ ವಿಧಾನಸಭಾ ಕ್ಷೇತ್ರದ ಕಡಲ ತೀರದಲ್ಲಿ ಸಮುದ್ರ ಕೋರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ ಕಾಮಗಾರಿ | 151.00 |
| | **ಒಟ್ಟು (ಲಕ್ಷಗಳಲ್ಲಿ)** | **7000.00** |

(ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಂದ
ಅನುಮೋದಿತ)

ತಮ್ಮ ನಂಬುಗೆಯ

28/9/202

(ಎಸ್. ಯೋಗಾನಂದ)

ಸರ್ಕಾರದ ಅಧೀನ ಕಾರ್ಯದರ್ಶಿ,

ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.(ಬಂದರು)

ಪ್ರತಿ:-

1) ಮಾನ್ಯ ಮುಜರಾಯಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ [illegible]

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2022-23ನೇ ಸಾಲಿನ ಮಳೆಗಾಲದಲ್ಲಿ, ಮಂಗಳೂರು, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ತೀವ್ರ ಸಮುದ್ರ ಕೊರೆತ ಸಂಭವಿಸಿದ ಪ್ರದೇಶದಲ್ಲಿ ಪರಿಹಾರ ಕಾರ್ಯಗಳಿಗಾಗಿ ರಾಜ್ಯ ವಿಪತ್ತು ಪರಿಹಾರ ನಿಧಿಯಡಿ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ: ಕಂಇ 226 ಟಿಎನ್‌ಆರ್ 2022, ದಿನಾಂಕ:08.07.2022, 06.08.2022 ಮತ್ತು 07.09.2022.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರ ಅ.ಸ. ಪತ್ರ ಸಂಖ್ಯೆ: IDD 118 PSP 2022, ದಿನಾಂಕ:16.07.2022.
3) ಮುಖ್ಯ ಇಂಜಿನಿಯರ್, ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ ಇವರ ಪತ್ರ ಸಂಖ್ಯೆ: ಕಜಮ-21/ಅಭಿವೃದ್ಧಿ-II/2022, ದಿನಾಂಕ:30.08.2022.

ಮುಖ್ಯ ಇಂಜಿನಿಯರ್ ಮತ್ತು ಸದಸ್ಯ ಕಾರ್ಯದರ್ಶಿಗಳ ಕಚೇರಿ ಕರ್ನಾಟಕ ಜಲಸಾರಿಗೆ ಮಂಡಳಿ

| | |
|---|---|
| ಮು.ಇಂ. | |
| ತಾಂ.ಸ. | |
| ಅಧೀಕ್ಷಕ | |
| ಪತ್ರ ಸಂಖ್ಯೆ | |
| ದಿನಾಂಕ | 23/9/2022 |


*****

**ಪ್ರಸ್ತಾವನೆ:**

2022-23ನೇ ಸಾಲಿನ ಆಯವ್ಯಯದಲ್ಲಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ, ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಯನ್ವಯ ಪ್ರಕೃತಿ ವಿಕೋಪ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಕೇಂದ್ರ ಸರ್ಕಾರದ ಪಾಲು ರೂ.664.00 ಕೋಟಿ ಹಾಗೂ ರಾಜ್ಯ ಸರ್ಕಾರದ ಪಾಲು ರೂ.221.34 ಕೋಟಿಗಳನ್ನೊಳಗೊಂಡಂತೆ ಒಟ್ಟು ರೂ.885.34 ಕೋಟಿ ಹಂಚಿಕೆ ಮಾಡಲಾಗಿದೆ.

2022-23ನೇ ಸಾಲಿನ ಮುಂಗಾರು ಋತುವಿನಲ್ಲಿ ರಾಜ್ಯಾದ್ಯಂತ ಭಾರೀ ಪ್ರಮಾಣದಲ್ಲಿ ಮುಂಗಾರು ಮಳೆಯಾಗುತ್ತಿದ್ದು, ಇದರಿಂದ ಪ್ರವಾಹ ಪರಿಸ್ಥಿತಿ ಉಂಟಾಗಿ ಮಾನವ ಜೀವ ಹಾನಿ, ಜಾನುವಾರು ಜೀವ ಹಾನಿ, ಬೆಳೆ ಹಾನಿ, ಮನೆ ಹಾನಿ ಹಾಗೂ ಸಾರ್ವಜನಿಕ ಮೂಲ ಸೌಕರ್ಯ ಹಾನಿಯಾಗಿರುವುದು ಜಿಲ್ಲೆಗಳಲ್ಲಿ ಕಂಡು ಬಂದಿದೆ. ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಯನ್ವಯ ಪ್ರವಾಹ ಪರಿಹಾರಕ್ಕಾಗಿ ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ (SDRF) ರೂ.276.00 ಕೋಟಿಗಳನ್ನು ಮೇಲೆ ಓದಲಾದ (1)ರ ಆದೇಶದಲ್ಲಿ ಜಿಲ್ಲೆಗಳಿಗೆ ಬಿಡುಗಡೆಗೊಳಿಸಲಾಗಿದೆ.

ಮೇಲೆ ಓದಲಾದ (2)ರ ಅ.ಸ. ಪತ್ರದಲ್ಲಿ ಹಾಗೂ ಮೇಲೆ ಓದಲಾದ (3)ರ ಪತ್ರದಲ್ಲಿ ಪ್ರಸಕ್ತ ಸಾಲಿನ ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದ ಹಾಗೂ ಅರಬ್ಬಿ ಸಮುದ್ರದಲ್ಲಿ ಉಂಟಾದ ಚಂಡಮಾರುತಗಳ ಪ್ರಭಾವದಿಂದ ತೀವ್ರ ಸ್ವರೂಪದ ಸಮುದ್ರ ಕೊರೆತ ಸಂಭವಿಸಿ ಸಾರ್ವಜನಿಕ ಆಸ್ತಿ-ಪಾಸ್ತಿಗಳಿಗೆ ಹಾನಿಯುಂಟಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಸಭೆ ನಡೆಸಿ ಸೂಚಿಸಿರುವಂತೆ ಸಮುದ್ರ ಕೊರೆತದಿಂದ ಉಂಟಾದ ರಸ್ತೆ ಹಾನಿ, ಸಾರ್ವಜನಿಕ ಆಸ್ತಿ-ಪಾಸ್ತಿ ಹಾನಿ ಹಾಗೂ ವಿದ್ಯುತ್ ಕಂಬಗಳ ದುರಸ್ತಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳುವಂತೆ ತಿಳಿಸಿದ್ದು, ಅದರಂತೆ, ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ರಾಜ್ಯ ವಿಪತ್ತು ನಿರ್ವಹಣಾ ಪರಿಹಾರ ನಿಧಿ (SDRF)ರಡಿ ಅನುದಾನ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಸಮುದ್ರ ಕೊರೆತದಿಂದ ಉಂಟಾದ ರಸ್ತೆ ಹಾನಿ, ಸಾರ್ವಜನಿಕ ಆಸ್ತಿ-ಪಾಸ್ತಿ ಹಾನಿ ಹಾಗೂ ವಿದ್ಯುತ್ ಕಂಬಗಳ ದುರಸ್ಥಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಲು SDRF ರಡಿ ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ತಲಾ ರೂ.5.00ಕೋಟಿಗಳಂತೆ ಒಟ್ಟು ರೂ.15.00ಕೋಟಿಗಳನ್ನು ಕರ್ನಾಟಕ ಜಲಸಾರಿಗೆ ಮಂಡಳಿಗೆ ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ:

**ಸರ್ಕಾರದ ಆದೇಶ ಸಂಖ್ಯೆ:ಕಂಇ 331 ಟಿಎನ್‌ಆರ್ 2022;**
**ಬೆಂಗಳೂರು, ದಿನಾಂಕ:14-09-2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2022-23ನೇ ಸಾಲಿನ ಮಳೆಗಾಲದ ಸಂದರ್ಭದಲ್ಲಿ ಸಮುದ್ರ ಕೊರೆತದಿಂದ ಉಂಟಾದ ಸಾರ್ವಜನಿಕ ಮೂಲಭೂತ ಸೌಕರ್ಯಗಳ ಹಾನಿಯ ದುರಸ್ತಿಗಾಗಿ ಕಾಮಗಾರಿಗಳನ್ನು ಕೈಗೊಳ್ಳಲು ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ತಲಾ ರೂ.5.00ಕೋಟಿಗಳಂತೆ ಒಟ್ಟು ರೂ.15.00ಕೋಟಿ (ಹದಿನೈದು ಕೋಟಿ ರೂಪಾಯಿ ಮಾತ್ರ)ಗಳನ್ನು ಕರ್ನಾಟಕ ಜಲಸಾರಿಗೆ ಮಂಡಳಿಯ ಲೆಕ್ಕ ಶೀರ್ಷಿಕೆ:4711-02-103-2-02-139"ಗೆ ಬಿಡುಗಡೆ ಮಾಡಿ ಆದೇಶಿಸಿದೆ.

ಈ ವೆಚ್ಚವನ್ನು 2022-23ನೇ ಸಾಲಿನ ರಾಜ್ಯ ವಿಪತ್ತು ಪರಿಹಾರ ನಿಧಿ (SDRF) ಲೆಕ್ಕ ಶೀರ್ಷಿಕೆ "2245-80-102-0-01-139 (ಪ್ರಧಾನ ಕಾಮಗಾರಿಗಳು)"ರಡಿ ಭರಿಸತಕ್ಕದ್ದು.

ಷರತ್ತುಗಳು:

1. ಈ ಆದೇಶದಲ್ಲಿ ಬಿಡುಗಡೆಮಾಡಿದ ಅನುದಾನವನ್ನು ಪ್ರಸ್ತುತ ಚಾಲ್ತಿಯಲ್ಲಿರುವ ಕೇಂದ್ರ ಸರ್ಕಾರದ SDRF/ NDRF ಮಾರ್ಗಸೂಚಿಯನ್ವಯ ಪರಿಹಾರ ಕಾರ್ಯಗಳಿಗಾಗಿ ವೆಚ್ಚ ಭರಿಸುವುದು.
2. ಈ ಆದೇಶದಲ್ಲಿ ಬಿಡುಗಡೆಮಾಡಿದ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಒದಗಿಸಲಾಗಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ಬಳಸತಕ್ಕದ್ದು ಹಾಗೂ ಅನುದಾನ ವೆಚ್ಚ ಮಾಡಿದ್ದಕ್ಕೆ ಸಂಬಂಧಿಸಿದಂತೆ ಸೂಕ್ತ ಲೆಕ್ಕಪತ್ರಗಳನ್ನು ಇಡತಕ್ಕದ್ದು ಮತ್ತು ಹಣ ಬಳಕೆ ಪ್ರಮಾಣ ಪತ್ರವನ್ನು ಸೂಕ್ತ ಪ್ರಾಧಿಕಾರದಿಂದ ದೃಢೀಕರಿಸಿ ಕಡ್ಡಾಯವಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
3. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನದ ವೆಚ್ಚದ ವಿವರವನ್ನು ಕೇಂದ್ರೀಯ ಗೃಹ ಮಂತ್ರಾಲಯದ NDMIS ಪೋರ್ಟಲ್‌ರಲ್ಲಿ ಜಿಲ್ಲಾಧಿಕಾರಿಗಳ ಮೂಲಕ ನಮೂದಿಸುವುದು.
4. ಹಣ ಬಳಕೆಯಲ್ಲಿ ಯಾವುದೇ ಲೋಪವಾದಲ್ಲಿ ಮುಖ್ಯ ಇಂಜಿನೀಯರ್ ಕರ್ನಾಟಕ ಜಲಸಾರಿಗೆ ಮಂಡಳಿ ಕಾರವಾರ ಇವರನ್ನೇ ನೇರವಾಗಿ ಜವಾಬ್ದಾರರನ್ನಾಗಿ ಮಾಡಲಾಗುವುದು.

ಬಿಡುಗಡೆ ಮಾಡಿರುವ ಅನುದಾನವನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಇವರ ಪರವಾಗಿ ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರು ಲೆಕ್ಕ ಶೀರ್ಷಿಕೆ "2245-80-102-0-01-139" ರಡಿ ಕರ್ನಾಟಕ ಜಲಸಾರಿಗೆ ಮಂಡಳಿಯ ಲೆಕ್ಕ ಶೀರ್ಷಿಕೆ:4711-02-103-2-02-139"ಗೆ ಅಪ್‌ಲೋಡ್ ಮಾಡುವುದು.

...3

ಬಿಡುಗಡೆಯಾದ ಅನುದಾನವನ್ನು ಕರ್ನಾಟಕ ಜಲಸಾರಿಗೆ ಮಂಡಳಿಯ ಮೂಲಕ K-2ರಡಿ ಸಂಬಂಧಪಟ್ಟ ಡ್ರಾಯಿಂಗ್ ಆಫೀಸರ್‌ಗೆ ಮ್ಯಾಪಿಂಗ್ ಮಾಡಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 476 ವೆಚ್ಚ-7/2022 ದಿನಾಂಕ: 05-08-2022 ರಲ್ಲಿ ನೀಡಿದ ಸಹಮತದನುಸಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜಿ.ಎನ್. ಸುಶೀಲ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿಪತ್ತು ನಿರ್ವಹಣೆ ಮತ್ತು ಸೇವೆಗಳು-3)

<u>ಇವರಿಗೆ:</u>

1. ಪ್ರಧಾನ ಮಹಾಲೇಖಪಾಲರು (A & E), ಕರ್ನಾಟಕ, ಪಿ.ಬಿ.ನಂ. 5369 ಪಾರ್ಕ್ ಹೌಸ್ ರೋಡ್, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (E& RSA), ಕರ್ನಾಟಕ, ಪಿ.ಬಿ.ನಂ.5398, ನ್ಯೂ ಬಿಲ್ಡಿಂಗ್ 'ಆಡಿಟ್ ಭವನ', ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (G& SSA), ಕರ್ನಾಟಕ, ಪಿ.ಬಿ.ನಂ.5398, ನ್ಯೂ ಬಿಲ್ಡಿಂಗ್ 'ಆಡಿಟ್ ಭವನ', ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ, ಜಿಲ್ಲೆ.
6. ಮುಖ್ಯ ಇಂಜಿನೀಯರ್ ಮತ್ತು ಸದಸ್ಯರು (ತಾಂತ್ರಿಕ) ಕರ್ನಾಟಕ ಜಲಸಾರಿಗೆ ಮಂಡಳಿ, ಬೈತ್‌ಖೋಲ್, ಕಾರವಾರ.
7. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
8. ಜಂಟಿ ನಿರ್ದೇಶಕರು, ಖಜಾನೆ ಆಯುಕ್ತಾಲಯ, ಕೆಪಿಸಿಎಲ್, ಹಸಿರು ಕಟ್ಟಡ, ಅರಮನೆ ರಸ್ತೆ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-7 & 8), ವಿಧಾನ ಸೌಧ, ಬೆಂಗಳೂರು.
10. ಜಿಲ್ಲಾ ಖಜಾನಾಧಿಕಾರಿಗಳು, ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ, ಜಿಲ್ಲೆ.

<u>ಪ್ರತಿ:</u>

1. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
3. ಆಯುಕ್ತರು, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಇವರ ಆಪ್ತ ಸಹಾಯಕರು, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ) ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಇವರ ಆಪ್ತ ಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು.
6. ಲೆಕ್ಕ ಪತ್ರ ಶಾಖೆ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ).
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಹಿಂಬರಹ ಕ್ರ.ಸಂ. ಮುಇಂ/ತಾಂತ್ರಿಕ/2022-23/100

ಮುಖ್ಯ ಇಂಜಿನೀಯರ್
ಮತ್ತು ಸದಸ್ಯ (ತಾಂತ್ರಿಕ)
ಕರ್ನಾಟಕ ಜಲಸಾರಿಗೆ ಮಂಡಳಿ
ದಿನಾಂಕ : 22-09-2022

ಪ್ರತಿಯನ್ನು, ಈ ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸುತ್ತಾ, ಸರ್ಕಾರದ ಆದೇಶ ಸಂಖ್ಯೆ: ಕಇಂ-331/ಟಿಎನ್ಆರ್/2022 ದಿನಾಂಕ: 14.09.2022 ರಲ್ಲಿ ಸೂಚಿಸಿದಂತೆ ಪ್ರಸ್ತುತ ಚಾಲ್ತಿಯಲ್ಲಿರುವ ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿನ್ವಯ ಅಂದಾಜು ಪಟ್ಟಿಗಳನ್ನು ತಯಾರಿಸಿ ಕೂಡಲೇ ಸಲ್ಲಿಸಲು ತಿಳಿಸಿದೆ.

1. ಅಧೀಕ್ಷಕ ಇಂಜಿನೀಯರ್, ಬಂದರು ಮತ್ತು ಒಳನಾಡು ಜಲಸಾರಿಗೆ ನಿರ್ದೇಶನಾಲಯ, ಕಾರವಾರ
2. ಕಾರ್ಯನಿರ್ವಾಹಕ ಇಂಜಿನೀಯರ್, ಬಂದರು ವಿಭಾಗ, ಕಾರವಾರ
3. ಕಾರ್ಯನಿರ್ವಾಹಕ ಇಂಜಿನೀಯರ್, ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ
4. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ನಂ. 1, ಬಂದರು ಉಪ ವಿಭಾಗ, ಕಾರವಾರ
5. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ಬಂದರು ಉಪ ವಿಭಾಗ, ಹೊನ್ನಾವರ
6. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ಸಮುದ್ರ ಕೊರೆತ ತಡೆ ಕಾಮಗಾರಿಗಳ ಉಪ ವಿಭಾಗ, ಕುಮಟಾ
7. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ಬಂದರು ಮತ್ತು ಮೀನುಗಾರಿಕಾ ಉಪ ವಿಭಾಗ, ಉಡುಪಿ
8. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ಬಂದರು ಮತ್ತು ಮೀನುಗಾರಿಕಾ ಉಪ ವಿಭಾಗ, ಮಂಗಳೂರು

ಮುಖ್ಯ ಇಂಜಿನೀಯರ್
ಮತ್ತು ಸದಸ್ಯ (ತಾಂತ್ರಿಕ)
ಕರ್ನಾಟಕ ಜಲಸಾರಿಗೆ ಮಂಡಳಿ